# ಜ್ಞಾನಪೀಠ ಸಾಮ್ರಾಟರು



ಕನ್ನಡ ತೋಟದ ನರುಗಂಪು
ರಾಷ್ಟ್ರಕವಿ ಕುವೆಂಪು
ಕನ್ನಡನಾಡಿನ ಧ್ರುವತಾರೆ
ವರ ಕವಿ ದತ್ತಾತ್ರೇಯ ಬೇಂದ್ರೆ
ಕರ್ನಾಟಕದ ಮಣಿ ಮಕುಟ
ಇವರೇ ಶಿವರಾಮ ಕಾರಂತ
ಕನ್ನಡನಾಡಿನ ಸ್ಥಿರ ಆಸ್ತಿ
ವೆಂಟೇಶ ಅಯ್ಯಂಗಾರ್ ಮಾಸ್ತಿ
ಕನ್ನಡ ಕವಿಕುಲ ಸಿರಿ ತಿಲಕ
ಇವರೇ ವಿ.ಕೃ. ಗೋಕಾಕ
ಕನ್ನಡನಾಡಿನ ಸತ್ಕೀರ್ತಿ
ಅನಂತಮೂರ್ತಿ ನವ ಸ್ಫೂರ್ತಿ
ಸವಿಗನ್ನಡದ ಜೇನುಗೂಡ
ಇವರೇ ಗಿರೀಶ ಕಾರ್ನಾಡ
ಕನ್ನಡ ಜನಪದ ಝೇಂಕಾರ
ಚಂದ್ರಶೇಖರ ಕಂಬಾರ
ಇವರೇ ಕನ್ನಡ ಸಾಧಕರು
ಜ್ಞಾನಪೀಠ ಕುಲ ಭೂಷಣರು

**-ಅಮೃತೇಶ್ ತಂಡರ,**
**ಅಣ್ಣಿಗೇರಿ**



# ಅಳಿಲ ಮರಿಯ ಕೂಗು

ಅಮ್ಮ ನನ್ನನೇಕೆ ಇಲ್ಲಿ
ಕೂಡಿ ಹಾಕುವೆ?
ಗೂಡಿನಿಂದ ಹೊರಗೆ ಬಿಡದೆ
ಕುರುಡು ತರಿಸುವೆ!

ಮರದ ಪೊಟರೆಯಲ್ಲಿ ಕೂತು
ಕಾಲ ಕಳೆವುದೆ?
ಪ್ರಕೃತಿ ಸೊಬಗನುಣದೆ ನಿಂತು
ಬದುಕ ಮರೆವುದೆ?

ದಾರಿಬಿಡು ಹೆಗಲು ಕೊಡು
ಹೊರಗೆ ಹೋಗಲು
ಕಿರಿಯ ನಾನು ಹಾದಿ ಕೊಡು
ಜಗವ ನೋಡಲು

ದಾರಿ ಕೊಡದಿದ್ದರೆ ನಾನು
ಸುಮ್ಮನಿರೊಲ್ಲ
ಹೊರಗಿನೆಲ್ಲಾ ಚಿತ್ರ ಕಂಡು
ಸವಿಯದಿರೊಲ್ಲ

ತವಕ ನನಗೆ ಹೊರಗೆ ಹೋಗಿ
ಭುವನ ನೋಡಲು
ವಿವಿಧ ಪ್ರಕೃತಿ ಚಿತ್ರ ಕತೆಯ
ಸವಿಯನುಣ್ಣಲು

ಮರಗಿಡ ನದಿನಾಲೆ
ಗಿರಿ ಚಿತ್ರ ಬೆಡಗನು!
ನೋಡಿ ನಲಿದು ಹಾಡಿ ಕುಣಿವೆ
ಜಗದ ಸೊಬಗನು!!

**-ದೊಡ್ಡ ಬಾಣಗೆರೆ ಪ್ರಕಾಶಮೂರ್ತಿ,**
**ಚಿತ್ರದುರ್ಗ**